

ಡಾ.ವಿನೋದ ಛೆಬ್ಬಿ

ಪರಸ್ಪರರ ನೇತ್ಯಾತ್ಮಕ ಗುಣಗಳು ಒಂದಕ್ಕೊಂದು ತೆಕ್ಕೆಬಿದ್ದು ಕುಸ್ತಿಯಾಡುವುದನ್ನೇ ಜಗಳ ಎನ್ನುತ್ತೇವೆ.

# 83: ಇಬ್ಬರೂ ಸರಿಯೆ!

ಲೋಚನ್ ಲೂಸಿಯ ದಾಂಪತ್ಯದ ಬಗೆಗೆ ಮಾತಾಡುತ್ತಿದ್ದೆವು. ಅವರಿಬ್ಬರೂ ಸಂಗಾತಿಯನ್ನು ಆರಿಸಿಕೊಳ್ಳುವಾಗ ಹೇಗೆ ಸಮಸ್ಯೆಗಳನ್ನೂ ಆರಿಸಿಕೊಂಡಿದ್ದಾರೆ ಎಂಬುದನ್ನು ಅರಿತೆವು. ಈಗ ಈ ದಂಪತಿಯ ಬಗೆಗೆ ಮುಂದಿನ ಸಲದ ಸಂದರ್ಶನದಲ್ಲಿ ಏನೇನು ಗೊತ್ತಾಯಿತು ಎನ್ನುವುದನ್ನು ವಿವರಿಸುತ್ತೇನೆ.

ಅವೊತ್ತು ಲೋಚನ್ ಲೂಸಿ ನನ್ನೆದುರು ಬಂದು ಕೂತಾಗ ಅವರನ್ನು ನೋಡಿ, ಮುಗುಳ್ನಕ್ಕು ಕೇಳಿದೆ: 'ನಿಮ್ಮಿಬ್ಬರ ನಡುವೆ ಯಾವ ಕಾರಣಗಳಿಗಾಗಿ ಜಗಳ ಉಂಟಾಗುತ್ತದೆ?' ಪ್ರಶ್ನೆ ಕೇಳಿ ಕುರ್ಚಿ ಸ್ವಲ್ಪ ಹಿಂದೆಳೆದು ಕುಳಿತು ಉತ್ತರಕ್ಕಾಗಿ ಕಾಯ್ದೆ.

ಇಬ್ಬರೂ ಪರಸ್ಪರ ಮುಖ ನೋಡಿಕೊಂಡು ಯಾರು ಶುರುಮಾಡಬೇಕು ಎಂದು ಯೋಚಿಸುತ್ತಿರುವಾಗಲೇ ಲೂಸಿ ಮಾತಾಡಿದಳು. 'ಇವನು ಬೇಗ ಏಳುವುದಿಲ್ಲ, ಸಿಕ್ಕಾಪಟ್ಟೆ ಕೆಲಸ ಮುಂದೆಹಾಕುತ್ತಾನೆ. ನನಗೆ ಸಹಾಯ ಮಾಡುವುದಿಲ್ಲ, ತಾನು ತಪ್ಪು ಮಾಡಿ ನನ್ನ ತಲೆಯಮೇಲೆ ಹಾಕುತ್ತಾನೆ. ಯಾವುದಕ್ಕೂ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ, ಮೊಂಡುವಾದ ಮಾಡುತ್ತಾನೆ..' ಎಂದು ಮುಂಚೆ ಅವನ ಬಗೆಗೆ ಹೇಳಿಕೊಂಡ ವಿಷಯಗಳನ್ನು ಪುನಃ ಪ್ರಸ್ತಾಪಿಸಿದಳು. ಅವಳು ಎರಡು ವಾಕ್ಯ ಮುಗಿಸುವಷ್ಟರಲ್ಲಿ ಲೋಚನ್ ಅವಳನ್ನು ತಡೆದ. 'ಯಾಕೆ? ನೀನು ನಡುರಾತ್ರಿ ಮೀರಿದರೂ ನನ್ನನ್ನು ಕೊರೆಯುತ್ತಾ ಇರ್ತೀಯಾ. ಕೂತರೂ ತಪ್ಪು ನಿಂತರೂ ತಪ್ಪು ಎಂದು ಜಗಳ ತೆಗೆತೀಯಾ. ನಾನು ಇನ್ನೇನು ಮಾಡಲಿಕ್ಕೆ ಆಗುತ್ತದೆ? ನನಗಾಗಿ ಸ್ವಲ್ಪ ಅವಕಾಶ, ಟೈಮ್ ಕೊಡುವುದಿಲ್ಲ. ನಾನು ಏನು ಮಾಡಿದರೂ ಮೆಚ್ಚುವುದಿಲ್ಲ, ಒಂದೇ ಸಮ ಡಿಮ್ಯಾಂಡ್ ಮಾಡುತ್ತೀಯಾ. ನನಗೂ ಸಾಕಾಗಿ ಹೋಗಿದೆ...'

ನಾನು ಆಸಕ್ತಿಯಿಂದ ಗಮನಿಸತೊಡಗಿದೆ. ಅವನ ಮಾತನ್ನು ಅವಳು, ಅವಳ ಮಾತನ್ನು ಅವನು ಇಬ್ಬರೂ ಕತ್ತರಿಸುತ್ತ ತಮ್ಮದೇ ವಾದ ಮಂಡಿಸುತ್ತಿದ್ದರು. ನಡುನಡುವೆ ನನ್ನಕಡೆ ನೋಡುತ್ತ ತಾನೆಷ್ಟು ಸರಿ ಎಂದು ನನ್ನ ಒಪ್ಪಿಗೆ ಕೇಳುವಂತೆ ತನ್ನನ್ನು ಸಮರ್ಥಿಸುವಂತೆ ನನ್ನ ಕಡೆಗೆ ನೋಡುತ್ತಿದ್ದರು. ಬರಬರುತ್ತ ಜಗಳ ತಾರಕಕ್ಕೆ ಏರಿತು. ಕೊನೆಗೆ ಒಬ್ಬರಿಗೊಬ್ಬರು ಯೂ ಶಟಪ್, ಯೂ ಶಟಪ್ ಎನ್ನುವುದೂ ಆಯಿತು. ಇಬ್ಬರೂ ಹತಾಶರಾಗಿ, ದಣಿದು ವಿರುದ್ಧ ದಿಕ್ಕಿಗೆ ಮುಖಮಾಡಿ ಸುಮ್ಮನೆ ಕುಳಿತುಕೊಂಡರು.

ವಾಗ್ವಾದದ ಮೂಲಕ ಲೋಚನ್ ಲೂಸಿ ಪರಸ್ಪರ  ಏನು ತಿಳಿಯಪಡಿಸಲು ಬಯಸುತ್ತಿದ್ದಾರೆ ಎಂದು ಯೋಚಿಸಿದೆ. ಲೋಚನನ ಕಾಲಹರಣ, ಕೆಲಸಗಳ್ಳತನ ತನಗಿಷ್ಟವಾಗಿಲ್ಲವೆಂದು, ಅದಕ್ಕೇ ತಾನು ಅವನ 'ಮೈಮೇಲೇರಿ' ಟೀಕಿಸುವುದು ಎಂದು ಲೂಸಿಯ ವಾದವಾದರೆ, ಅವಳ ಟೀಕೆ ಬಯ್ಗುಳು ಅತಿಯಾಗಿ, ತನ್ನ ಖಾಸಗಿತನಕ್ಕೆ ಅವಕಾಶ ಇಲ್ಲವಾಗಿರುವುದರಿಂದ ಅವಳೊಡನೆ ಸಹಕರಿಸಲು ಮನಸ್ಸು ಬರುತ್ತಿಲ್ಲವೆಂದು ಲೋಚನನ ವಾದ.

ಅಂದರೆ ಅವನ ಕೆಲಸಗಳ್ಳತನಕ್ಕೆ ಪ್ರತಿಯಾಗಿ ಅವಳ ಹೀನೈಕೆ, ಹಾಗೂ ಅವಳ ಹೀನೈಕೆಗೆ ಪ್ರತಿಯಾಗಿ ಅವನ ಕೆಲಸಗಳ್ಳತನ ಪರಸ್ಪರರ ನೇತ್ಯಾತ್ಮಕ ಗುಣಗಳು ಒಂದಕ್ಕೊಂದು ತೆಕ್ಕೆಬಿದ್ದು ಕುಸ್ತಿಯಾಡುತ್ತಿವೆ! ಹೆಚ್ಚಿನ ದಾಂಪತ್ಯಗಳ ಜಗಳದಲ್ಲಿ ಯಾರದೂ ತಪ್ಪಿರುವುದಿಲ್ಲ. ಆದರೆ ಒಬ್ಬರ ನಡತೆಯು ಇನ್ನೊಬ್ಬರಿಗೆ ಸರಿಬರದಿರುವಾಗ ಅದೇ ಜಗಳಕ್ಕೆ ಕಾರಣವಾಗುತ್ತದೆ!

ಈ ಸಂದರ್ಭದಲ್ಲಿ ನನಗೆ ಇನ್ನೊಂದು ವಿಷಯ ಕಂಡುಬಂತು: ಲೂಸಿ ಮೊದಲ ಸಲ ನನ್ನಲ್ಲಿಗೆ ಬಂದಾಗ ಲೋಚನನ ಜೊತೆಗೆ ನಡೆದುಕೊಳ್ಳಲು ಆಕೆಗೆ ಕೆಲವು ಸಲಹೆಗಳನ್ನು ಕೊಟ್ಟಿದ್ದೆ. ಅದು ಕೆಲಸ ಮಾಡಿದ್ದರಿಂದಲೇ ಆಕೆ ಗಂಡನನ್ನು ಕರೆತರಲು ಸಾಧ್ಯವಾಯಿತು. ನನ್ನೆದುರು ಇಬ್ಬರೂ ಮಾತಾಡುತ್ತಿರುವಾಗ ಆಕೆ ಆ ಸಲಹೆಗಳನ್ನು ಅನುಸರಿಸುತ್ತಿಲ್ಲ!

ಹಾಗೆಯೇ ಇನ್ನೊಂದು ಅಂಶವೂ ನಿಚ್ಚಳವಾಯಿತು. ಕೆಲವೊಮ್ಮೆ ಲೋಚನ ತನ್ನ ಖಾಸಗಿತನದ ಅಗತ್ಯವನ್ನು ಅರ್ಥಮಾಡಿಕೋ ಎಂದು ಕೇಳಿಕೊಳ್ಳುತ್ತಿದ್ದರೂ ಲೂಸಿ ಅದಕ್ಕೆ ಕಿವಿಗೊಡುತ್ತಿರಲಿಲ್ಲ. ಕೇಳಿದಂತೆ  ಮಾಡಿ ಮತ್ತೆ ತನ್ನದೇ ಧಾಟಿಯಲ್ಲಿ ವಾದ ಮುಂದುವರಿಸುತ್ತಿದ್ದಳು. ಒಂದುಕಡೆ ಸಂಬಂಧವನ್ನು ಸುಧಾರಿಸಬೇಕೆಂದು ನನ್ನಲ್ಲಿ ಬಂದಿದ್ದಾಳೆ. ಆದರೆ ತನಗೆ ಇಂಥದ್ದು ಬೇಕು, ನಿನ್ನಿಂದ ಅದು ಸಿಗುತ್ತಿಲ್ಲ, ಅರ್ಥಮಾಡಿಕೋ ಎಂದು ಲೋಚನ ಹೇಳುತ್ತಿದ್ದರೂ ಅವನ ಅಹವಾಲನ್ನು ಅಲಕ್ಷಿಸುತ್ತಿದ್ದಾಳೆ. ಅಂದರೆ ಆಕೆಯಲ್ಲಿ ಸಂವೇದನಾಶೀಲತೆ ಕಾಣುತ್ತಿಲ್ಲ. ಗಂಡಹೆಂಡಿರು ಪರಸ್ಪರ ಪ್ರೀತಿಸುವಾಗ ಕಾಣುವ ಸಂವೇದನಾಶೀಲತೆ ಜಗಳದಲ್ಲಿ ಹೇಗೆ ಮಾಯವಾಯಿತು?

ನಾನು ಲೂಸಿಯನ್ನು ಕೇಳಿದೆ: 'ಲೂಸಿ, ನಿಮ್ಮ ಮನೆಯಲ್ಲಿ ನಿಮ್ಮ ಅಪ್ಪ ಅಮ್ಮ ಹೇಗೆ ವರ್ತಿಸುತ್ತಿದ್ದರು?'  ಅವಳು ಹಿಂದೆ ಮುಂದೆ ನೋಡಿದಳು. ಅದನ್ನು ಅರ್ಥಮಾಡಿಕೊಂಡು ಇಬ್ಬರಿಗೂ ಉದ್ದೇಶಿಸಿ ಹೇಳಿದೆ. 'ಇಬ್ಬರಲ್ಲಿ ಒಬ್ಬರು ನನ್ನೊಡನೆ ಪ್ರತ್ಯೇಕವಾಗಿ ಮಾತಾಡಬಯಸಿದರೆ ಅದಕ್ಕೂ ಅನುಮತಿಯಿದೆ. ಯಾಕೆಂದರೆ ಅನೇಕ ಸಲ ನಮ್ಮ ಮನಸ್ಸಿನಲ್ಲಿದ್ದುದನ್ನು ಸಂಗಾತಿ ಇರುವಾಗ ಬಿಚ್ಚಿಡಲು ಸಂಕೋಚ ಆಗುವುದು ಸಹಜ.' ಲೋಚನ ಅರ್ಥಮಾಡಿಕೊಂಡು ಹೊರಗೆದ್ದು ನಡೆದ. ಲೂಸಿ ಒಬ್ಬಳೇ ಮಾತು ಮುಂದುವರಿಸಿದಳು. ಒಂದು ಮುಖ್ಯವಾದ ಅಂಶ ಹಂಚಿಕೊಂಡಳು. ಆಕೆಯ ಅಪ್ಪ ಅಮ್ಮ ಪರಸ್ಪರ ಆಗಾಗ ಜಗಳವಾಡುತ್ತಿದ್ದರಷ್ಟೆ? ಹಾಗೆ ಮಾಡುವಾಗ ಮಗಳ ಭಾವನಾತ್ಮಕ ಬೆಳವಣಿಗೆಗೆ ಸಾಕಷ್ಟು ಸಮಯ ಕೊಡಲಾಗುತ್ತಿರಲಿಲ್ಲ. ಇದರ ಬಗೆಗೆ ಇಬ್ಬರಲ್ಲೂ ತಪ್ಪಿತಸ್ಥ ಭಾವನೆಯಿತ್ತು. ಹಾಗಾಗಿ ಮಗಳ ಜೊತೆಗೆ ಇರುವಾಗ ಅವಳ ತಪ್ಪನ್ನು ತಿದ್ದದೆ ಕೇವಲ ಮೆಚ್ಚಿಗೆ ವ್ಯಕ್ತಪಡಿಸುತ್ತಿದ್ದರು.

ಉದಾಹರಣೆಗೆ, ಆಕೆ ಒಂದು ಕೆಲಸ ಮಾಡಿದಾಗ 'ಕೆಲಸ ಈ ರೀತಿ ಸರಿಯಾಗಿದೆ/ ಇಲ್ಲ' ಎಂದು ವಿಮರ್ಶಿಸುವುದರ ಬದಲು 'ಇಂಥ ಕೆಲಸ ಮಾಡಿದ್ದೀಯಲ್ಲ, ನೀನು ಮಹಾನ್ ವ್ಯಕ್ತಿ!' ಎನ್ನುವ ಸಂದೇಶ ಕೊಡುತ್ತಿದ್ದರು. ಹಾಗಾಗಿ ತನ್ನ ಯಾವುದೇ ವರ್ತನೆಯೂ ಸ್ವೀಕಾರಾರ್ಹ ಎಂಬ ಭಾವನೆ ಲೂಸಿಯಲ್ಲಿ ಬೇರೂರುತ್ತ ಸಂವೇದನೆಯಿಂದ ಸ್ಪಂದಿಸುವ ಅಗತ್ಯ ಅವಳಿಗೆ ಕಾಣಲಿಲ್ಲ.

ಮಕ್ಕಳಿಗೆ ನಿರ್ವ್ಯಾಜ ಪ್ರೀತಿಯನ್ನು ಕೊಡಬೇಕು ನಿಜ. ಆದರೆ ಅವರ ತಪ್ಪುಗಳನ್ನು ತಿದ್ದದಿದ್ದರೆ ಅವರು ಇತರರ ಸೂಕ್ಷ್ಮ ಭಾವನೆಗಳನ್ನು ಅರ್ಥಮಾಡಿಕೊಳ್ಳಲಾರರು!

ಸೂಚನೆ: ಓದುಗರು ತಮ್ಮ ಸಂದೇಹ ಹಾಗೂ ಕೌಟುಂಬಿಕ ಸಮಸ್ಯೆಗಳ ಕುರಿತು ಸಲಹೆ, ಸೂಚನೆ ಪಡೆಯುವ ಇಚ್ಛೆ ಇದ್ದಲ್ಲಿ ಪತ್ರವನ್ನು ಬರೆದು ತಿಳಿಸಬಹುದು.

ವಿಳಾಸ:
ಸುಖೀ ದಾಂಪತ್ಯ ವಿಭಾಗ,
ಸುಧಾ ವಾರಪತ್ರಿಕೆ, 75,
ಮಹಾತ್ಮಾ ಗಾಂಧಿ ರಸ್ತೆ,
ಬೆಂಗಳೂರು – 560 001

**ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ.**
**ಲೈಂಗಿಕ ಸಮಸ್ಯೆಗಳಿಗೆ: 8050255229 (ಮಧ್ಯಾಹ್ನ 3ರಿಂದ 5ರ ತನಕ);**
**ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ)**
**ಲೇಖಕರ ವಿಳಾಸ: www.medisex.org**